Re. No. D. 221

भारत का राजपत्र
# The Gazette of India
ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

सं. १ नई दिल्ली, सोमवार, नवंबर १६, २००९ कार्तीक २५, १९३१ (शका) खंड. ४१
No. 1 New Delhi, Monday, November 16, 2009 Karthika 25, 1931 (Saka) Vol. 41
ಸಂ. ೧ ನವ ದೆಹಲಿ, ಸೋಮವಾರ, ನವೆಂಬರ್ ೧೬, ೨೦೦೯ ಕಾರ್ತೀಕ ೨೫, ೧೯೩೧ (ಶಕ) ಸಂಪುಟ. ೪೧

It contains the text of 10 Acts (Kannada

**Ministry of Law and Justice**
(Legislative Department)
New Delhi, 16th November, 2009

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 16ನೇ ನವೆಂಬರ್, 2009**

The Translation in Kannada of the following Acts, namely :- (1) The Petroleum Act, 1934 (2) The Election Commission (Conditions of Service of Election Commissioners and Transaction of Business) Act, 1991 (3) The National Commission for Backward Classes Act, 1993 (4) The Lotteries (Regulation) Act, 1998 (5) The Advocates' Welfare Fund Act, 2001 (6) The Indian Council of World Affairs Act, 2001 (7) The Delimitation Act, 2002 (8) The Cigarettes and Other Tobacco Products (Prohibition of Advertisement and Regulation of Trade and Commerce, Production, Supply and Distribution) Act, 2003 (9) The Protection of Women from Domestic Violence Act, 2005 (10) The Prohibition of Child Marriage Act, 2006 - are hereby published under the authority of the President and shall be deemed to be authoritative texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ :- (1) ಪೆಟ್ರೋಲಿಯಂ ಅಧಿನಿಯಮ, 1934 (2) ಚುನಾವಣಾ ಆಯೋಗ (ಚುನಾವಣಾ ಆಯುಕ್ತರುಗಳ ಸೇವಾ ಷರತ್ತುಗಳು ಮತ್ತು ವ್ಯವಹಾರ ನಿರ್ವಹಣೆ) ಅಧಿನಿಯಮ, 1991 (3) ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1993 (4) ಲಾಟರಿಗಳ (ವಿನಿಯಮನ) ಅಧಿನಿಯಮ, 1998 (5) ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 2001 (6) ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಅಧಿನಿಯಮ, 2001 (7) ಸೀಮಾ ನಿರ್ಣಯ ಅಧಿನಿಯಮ, 2002 (8) ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 2003 (9) ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 (10) ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಚುನಾವಣಾ ಆಯೋಗ (ಚುನಾವಣಾ ಆಯುಕ್ತರುಗಳ ಸೇವಾ ಷರತ್ತುಗಳು ಮತ್ತು ವ್ಯವಹಾರ ನಿರ್ವಹಣೆ) ಅಧಿನಿಯಮ, 1991

**(1991ರ ಅಧಿನಿಯಮ ಸಂಖ್ಯೆ 11)**

[25ನೇ ಜನವರಿ, 1991]

ಮುಖ್ಯ ಚುನಾವಣಾ ಆಯುಕ್ತರ ಮತ್ತು ಇತರ ಚುನಾವಣಾ ಆಯುಕ್ತರುಗಳ ಸೇವಾ ಷರತ್ತುಗಳನ್ನು ನಿರ್ಧರಿಸುವ ಮತ್ತು ಚುನಾವಣಾ ಆಯೋಗದ ವ್ಯವಹಾರ ನಿರ್ವಹಣೆಯ ಕಾರ್ಯ ವಿಧಾನಗಳು ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ನಲವತ್ತೊಂದನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ -I

## ಪ್ರಾರಂಭಿಕ

1. **ಚಿಕ್ಕ ಹೆಸರು.**- ಈ ಅಧಿನಿಯಮವನ್ನು ಚುನಾವಣಾ ಆಯೋಗ (ಚುನಾವಣಾ ಆಯುಕ್ತರುಗಳ ಸೇವಾ ಷರತ್ತುಗಳು ಮತ್ತು ವ್ಯವಹಾರ ನಿರ್ವಹಣೆ) ಅಧಿನಿಯಮ, 1991 ಎಂದು ಕರೆಯತಕ್ಕದ್ದು.

2. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮುಖ್ಯ ಚುನಾವಣಾ ಆಯುಕ್ತ" ಎಂದರೆ ಸಂವಿಧಾನದ 324ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಮುಖ್ಯ ಚುನಾವಣಾ ಆಯುಕ್ತ ಎಂದು ಅರ್ಥ;

(ಬಿ) "ಚುನಾವಣಾ ಆಯೋಗ" ಎಂದರೆ ಸಂವಿಧಾನದ 324ನೇ ಅನುಚ್ಛೇದದಲ್ಲಿ ಉಲ್ಲೇಖಿಸಿದ ಚುನಾವಣಾ ಆಯೋಗ ಎಂದು ಅರ್ಥ;

(ಸಿ) "ಚುನಾವಣಾ ಆಯುಕ್ತ" ಎಂದರೆ, ಸಂವಿಧಾನದ 324ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಯಾರೇ ಇತರ ಚುನಾವಣಾ ಆಯುಕ್ತ ಎಂದು ಅರ್ಥ.

## ಅಧ್ಯಾಯ - II

## ಮುಖ್ಯ ಚುನಾವಣಾ ಆಯುಕ್ತ ಮತ್ತು ಚುನಾವಣಾ ಆಯುಕ್ತರ ಸಂಬಳ ಮತ್ತು ಇತರ ಸೇವಾ ಷರತ್ತುಗಳು

3. **ಸಂಬಳ.**- ಮುಖ್ಯ ಚುನಾವಣಾ ಆಯುಕ್ತನಿಗೆ ಮತ್ತು ಇತರ ಚುನಾವಣಾ ಆಯುಕ್ತರುಗಳಿಗೆ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನ ಸಂಬಳಕ್ಕೆ ಸಮವಾದ ಸಂಬಳವನ್ನು ಸಂದಾಯ ಮಾಡತಕ್ಕದ್ದು:

ಪರಂತು, ಒಬ್ಬ ವ್ಯಕ್ತಿಯು, ಮುಖ್ಯ ಚುನಾವಣಾ ಆಯುಕ್ತನಾಗಿ ಅಥವಾ ಸಂದರ್ಭಾನುಸಾರ, ಚುನಾವಣಾ ಆಯುಕ್ತನಾಗಿ ಪದವನ್ನು ವಹಿಸಿಕೊಳ್ಳುವ ದಿನಾಂಕದ ನಿಕಟ ಪೂರ್ವದಲ್ಲಿ ಒಕ್ಕೂಟ ಸರ್ಕಾರದ ಅಧೀನದಲ್ಲಿನ ಅಥವಾ ಒಂದು ರಾಜ್ಯ ಸರ್ಕಾರದ ಅಧೀನದಲ್ಲಿನ ಯಾವುದೇ ಹಿಂದಿನ ಸೇವೆಗೆ ಸಂಬಂಧಿಸಿದಂತೆ ನಿವೃತ್ತಿ ವೇತನವನ್ನು (ಅಶಕ್ತತೆಯ ಅಥವಾ ಕ್ಷತಿ ನಿವೃತ್ತಿ ವೇತನವನ್ನು ಹೊರತುಪಡಿಸಿ) ಪಡೆಯುತ್ತಿದ್ದಲ್ಲಿ, ಅಥವಾ ಹಾಗೆ ಪಡೆಯಲು ಅರ್ಹನಾಗಿದ್ದು, ನಿವೃತ್ತಿ ವೇತನವನ್ನು ಪಡೆಯುವುದಕ್ಕೆ ಆಯ್ಕೆ ಮಾಡಿಕೊಂಡಿದ್ದರೆ, ಮುಖ್ಯ ಚುನಾವಣಾ ಆಯುಕ್ತನ ಅಥವಾ ಸಂದರ್ಭಾನುಸಾರ, ಚುನಾವಣಾ ಆಯುಕ್ತನ ಸೇವೆಗೆ ಸಂಬಂಧಿಸಿದಂತೆ ಅವನ ಸಂಬಳದಿಂದ,-

(ಎ) ಆ ನಿವೃತ್ತಿ ವೇತನದ ಮೊಬಲಗನ್ನು; ಮತ್ತು

(ಬಿ) ಅವನು ಹುದ್ದೆಯನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ, ಅಂತಹ ಹಿಂದಿನ ಸೇವೆಗೆ ಸಂಬಂಧಿಸಿದಂತೆ ಅವನಿಗೆ ಬರಬೇಕಾಗಿದ್ದ ನಿವೃತ್ತಿ ವೇತನದ ಒಂದು ಭಾಗದ ಬದಲಾಗಿ, ಅದರ ಪರಿವರ್ತಿತ ಮೌಲ್ಯವನ್ನು ಪಡೆದಿದ್ದರೆ, ನಿವೃತ್ತಿ ವೇತನದ ಆ ಭಾಗದ ಮೊಬಲಗನ್ನು

– ಕಡಿಮೆ ಮಾಡತಕ್ಕದ್ದು.

4. **ಪದಾವಧಿ.**– ಮುಖ್ಯ ಚುನಾವಣಾ ಆಯುಕ್ತನು ಅಥವಾ ಚುನಾವಣಾ ಆಯುಕ್ತನು ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಆರು ವರ್ಷಗಳ ಅವಧಿಯವರೆಗೆ ಪದದಲ್ಲಿರತಕ್ಕದ್ದು:

ಪರಂತು, ಮುಖ್ಯ ಚುನಾವಣಾ ಆಯುಕ್ತನು ಅಥವಾ ಚುನಾವಣಾ ಆಯುಕ್ತನು ಸದರಿ ಆರು ವರ್ಷಗಳ ಅವಧಿಯ ಮುಕ್ತಾಯಕ್ಕೆ ಮೊದಲೇ ಅರವತ್ತೈದು ವರ್ಷಗಳ ವಯಸ್ಸನ್ನು ತಲುಪಿದರೆ, ಅವನು ಸದರಿ ವಯಸ್ಸನ್ನು ತಲುಪಿದ ದಿನಾಂಕದಂದು ತನ್ನ ಪದವನ್ನು ತೆರವು ಮಾಡತಕ್ಕದ್ದು:

ಮತ್ತೂ ಪರಂತು, ಮುಖ್ಯ ಚುನಾವಣಾ ಆಯುಕ್ತನು ಅಥವಾ ಚುನಾವಣಾ ಆಯುಕ್ತನು, ಯಾವುದೇ ಸಮಯದಲ್ಲಿ, ತಾನು ರುಜು ಮಾಡಿ, ರಾಷ್ಟ್ರಪತಿಯವರಿಗೆ ಪತ್ರ ಬರೆಯುವ ಮೂಲಕ, ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು.

**ವಿವರಣೆ.**– ಈ ಪ್ರಕರಣದ ಉದ್ದೇಶಕ್ಕಾಗಿ, ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಪದವನ್ನು ಹೊಂದಿರುವ ಮುಖ್ಯ ಚುನಾವಣಾ ಆಯುಕ್ತನ ಅಥವಾ ಚುನಾವಣಾ ಆಯುಕ್ತನ ಸಂಬಂಧದಲ್ಲಿ ಆರು ವರ್ಷಗಳ ಅವಧಿಯನ್ನು, ಅವನು ಪದವನ್ನು ವಹಿಸಿಕೊಂಡ ದಿನಾಂಕದಿಂದ ಲೆಕ್ಕ ಹಾಕತಕ್ಕದ್ದು.

5. **ರಜೆ.**– (1) ಒಬ್ಬ ವ್ಯಕ್ತಿಯು, ಮುಖ್ಯ ಚುನಾವಣಾ ಆಯುಕ್ತನಾಗಿ ಅಥವಾ ಚುನಾವಣಾ ಆಯುಕ್ತನಾಗಿ ಪದವನ್ನು ವಹಿಸಿಕೊಳ್ಳುವ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಸರ್ಕಾರದ ಸೇವೆಯಲ್ಲಿದ್ದರೆ, ಅಂತಹ ದಿನಾಂಕಕ್ಕೆ ಮೊದಲು ಅವನು ಯಾವ ಸೇವೆಗೆ ಸೇರಿದ್ದನೋ ಆ ಸೇವೆಗೆ ತತ್ಕಾಲದಲ್ಲಿ ಅನ್ವಯಿಸುವ ನಿಯಮಗಳಿಗೆ ಅನುಸಾರವಾಗಿ ರಜೆಯನ್ನು ಅವನ ಪದಾವಧಿಯಲ್ಲಿ ಮಂಜೂರು ಮಾಡಬಹುದು, ಆದರೆ, ಪದಾವಧಿಯ ನಂತರ ಮಂಜೂರು ಮಾಡಕೂಡದು ಮತ್ತು 6ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಆತನ ರಜೆ ಲೆಕ್ಕದಲ್ಲಿರುವ ರಜೆಯನ್ನು ಮುಂದುವರಿಸಿಕೊಂಡು ಹೋಗಲು ಹಕ್ಕುಳ್ಳವನಾಗಿರತಕ್ಕದ್ದು.

(2) ಮುಖ್ಯ ಚುನಾವಣಾ ಆಯುಕ್ತನಾಗಿ ಅಥವಾ ಚುನಾವಣಾ ಆಯುಕ್ತನಾಗಿ ನೇಮಕಗೊಂಡ ಯಾರೇ ಇತರ ವ್ಯಕ್ತಿಗೆ, ಭಾರತ ಆಡಳಿತ ಸೇವೆಯ ಸದಸ್ಯನಿಗೆ ತತ್ಕಾಲದಲ್ಲಿ ಅನ್ವಯಿಸುವಂತಹ ನಿಯಮಗಳಿಗನುಸಾರವಾಗಿ ರಜೆಯನ್ನು ಮಂಜೂರು ಮಾಡಬಹುದು.

(3) ಮುಖ್ಯ ಚುನಾವಣಾ ಆಯುಕ್ತನಿಗೆ ಅಥವಾ ಚುನಾವಣಾ ಆಯುಕ್ತನಿಗೆ ರಜೆಯನ್ನು ಮಂಜೂರು ಮಾಡುವ ಅಥವಾ ನಿರಾಕರಿಸುವ ಮತ್ತು ಆತನಿಗೆ ಮಂಜೂರು ಮಾಡಿದ ರಜೆಯನ್ನು ರದ್ದುಗೊಳಿಸುವ ಅಥವಾ ಮೊಟಕುಗೊಳಿಸುವ ಅಧಿಕಾರವು ರಾಷ್ಟ್ರಪತಿಯಲ್ಲಿ ನಿಹಿತವಾಗಿರತಕ್ಕದ್ದು.

6. **ಚುನಾವಣಾ ಆಯುಕ್ತರುಗಳಿಗೆ ಸಂದಾಯವಾಗಬೇಕಾದ ನಿವೃತ್ತಿ ವೇತನ.**– (1) ಒಬ್ಬ ವ್ಯಕ್ತಿಯು, ಮುಖ್ಯ ಚುನಾವಣಾ ಆಯುಕ್ತನಾಗಿ ಅಥವಾ ಚುನಾವಣಾ ಆಯುಕ್ತನಾಗಿ ಪದವನ್ನು ವಹಿಸಿಕೊಳ್ಳುವ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಸರ್ಕಾರದ ಸೇವೆಯಲ್ಲಿದ್ದರೆ ಅವನು ಮುಖ್ಯ ಚುನಾವಣಾ ಆಯುಕ್ತನಾಗಿ ಅಥವಾ ಚುನಾವಣಾ ಆಯುಕ್ತನಾಗಿ ಪದವನ್ನು ವಹಿಸಿಕೊಂಡ ದಿನಾಂಕದಂದು ಸೇವೆಯಿಂದ ನಿವೃತ್ತನಾಗಿದ್ದಾನೆಂದು ಭಾವಿಸತಕ್ಕದ್ದು, ಆದರೆ, ಮುಖ್ಯ ಚುನಾವಣಾ ಆಯುಕ್ತನಾಗಿ ಅಥವಾ ಚುನಾವಣಾ ಆಯುಕ್ತನಾಗಿ ಅವನ ತರುವಾಯದ ಸೇವೆಯನ್ನು, ಅವನು ಯಾವ ಸೇವೆಗೆ ಸೇರಿದ್ದನೋ ಆ ಸೇವಾನಿರತ ನಿವೃತ್ತಿವೇತನ ಗಣನೆಗಾಗಿ, ಮುಂದುವರಿಯುತ್ತಿರುವ ಅನುಮೋದಿತ ಸೇವೆಯೆಂದು ಪರಿಗಣಿಸತಕ್ಕದ್ದು.

(2) ಮುಖ್ಯ ಚುನಾವಣಾ ಆಯುಕ್ತನು ಅಥವಾ ಚುನಾವಣಾ ಆಯುಕ್ತನು (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ರೀತಿಯಲ್ಲಾಗಲೀ ಅಥವಾ ರಾಜೀನಾಮೆಯಿಂದಾಗಲೀ, ಪದತ್ಯಾಗ ಮಾಡಿದರೆ, ಅಂತಹ ಪದತ್ಯಾಗದ ತರುವಾಯ, ಅವನು,-

(ಎ) ಕಾಲಕಾಲಕ್ಕೆ ತಿದ್ದುಪಡಿಯಾದಂತೆ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ (ಸೇವಾ ಷರತ್ತುಗಳು) ಅಧಿನಿಯಮ, 1958ರ ಅನುಸೂಚಿಯ ಭಾಗ-IIIರ ಉಪಬಂಧಗಳಿಗನುಸಾರವಾಗಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಸಂದಾಯವಾಗಬೇಕಾದ ನಿವೃತ್ತಿ ವೇತನಕ್ಕೆ ಸಮಾನವಾದ ನಿವೃತ್ತಿ ವೇತನವನ್ನು ; ಮತ್ತು

(ಬಿ) ಕಾಲಕಾಲಕ್ಕೆ ತಿದ್ದುಪಡಿಯಾದಂತೆ, ಸದರಿ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು, ಅನುಮತಿಸಬಹುದಾದಂಥ ನಿವೃತ್ತಿ ವೇತನ (ನಿವೃತ್ತಿ ವೇತನದ ಪರಿವರ್ತನೆಯೂ ಸೇರಿದಂತೆ), ಕುಟುಂಬ ನಿವೃತ್ತಿ ವೇತನ ಮತ್ತು ಉಪದಾನವನ್ನು

– ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(3) ಮುಖ್ಯ ಚುನಾವಣಾ ಆಯುಕ್ತನು ಅಥವಾ ಚುನಾವಣಾ ಆಯುಕ್ತನು ರಾಜೀನಾಮೆ ನೀಡುವ ಮೂಲಕ ಪದತ್ಯಾಗ ಮಾಡಿರುವುದನ್ನು ಹೊರತುಪಡಿಸಿ, ಈ ಅಧಿನಿಯಮದ ಉದ್ದೇಶಕ್ಕಾಗಿ,-

(ಎ) ಅವನು 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪದಾವಧಿಯನ್ನು ಪೂರ್ಣಗೊಳಿಸಿದ್ದರೆ; ಅಥವಾ

(ಬಿ) ಅವನು ಅರವತ್ತೈದು ವರ್ಷಗಳ ವಯಸ್ಸನ್ನು ತಲುಪಿದ್ದರೆ; ಅಥವಾ

(ಸಿ) ಪದತ್ಯಾಗ ಮಾಡುವುದು ಅವನ ಅನಾರೋಗ್ಯದ ಕಾರಣದಿಂದ ಅಗತ್ಯವಾಗಿತ್ತೆಂದು ವೈದ್ಯಕೀಯವಾಗಿ ಪ್ರಮಾಣೀಕರಿಸಿದ್ದರೆ

– ಅಂಥ ಸಂದರ್ಭದಲ್ಲಿ ಮಾತ್ರವೇ ಅವನು ಪದತ್ಯಾಗ ಮಾಡಿದ್ದಾನೆಂದು ಭಾವಿಸತಕ್ಕದ್ದು.

7. **ಸಾಮಾನ್ಯ ಭವಿಷ್ಯ ನಿಧಿಗೆ ವಂತಿಗೆ ನೀಡುವ ಹಕ್ಕು.**– ಮುಖ್ಯ ಚುನಾವಣಾ ಆಯುಕ್ತನಾಗಿ ಅಥವಾ ಚುನಾವಣಾ ಆಯುಕ್ತನಾಗಿ ಪದವನ್ನು ವಹಿಸಿಕೊಂಡಿರುವ ಪ್ರತಿಯೊಬ್ಬ ವ್ಯಕ್ತಿಯು, ಸಾಮಾನ್ಯ ಭವಿಷ್ಯ ನಿಧಿಗೆ (ಕೇಂದ್ರ ಸೇವೆಗಳು) ವಂತಿಗೆ ನೀಡಲು ಹಕ್ಕುಳ್ಳವನಾಗಿರತಕ್ಕದ್ದು.

8. **ಇತರ ಸೇವಾ ಷರತ್ತುಗಳು.**–ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ (ಸೇವಾ ಷರತ್ತುಗಳು) ಅಧಿನಿಯಮ, 1958 (1958ರ 41)ರ ಅಧ್ಯಾಯ–IVರ ಮೇರೆಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ತತ್ಕಾಲದಲ್ಲಿ ಅನ್ವಯಿಸುವಂತಹ ಪ್ರಯಾಣ ಭತ್ಯ, ಬಾಡಿಗೆ ರಹಿತ ವಾಸದ ಮನೆಯನ್ನು ಒದಗಿಸುವುದು ಮತ್ತು ಅಂತಹ ಬಾಡಿಗೆ ರಹಿತ ವಾಸದ ಮನೆಯ ಮೌಲ್ಯದ ಮೇಲೆ ಆದಾಯ ತೆರಿಗೆಯ ಸಂದಾಯದಿಂದ ವಿನಾಯಿತಿ, ವಾಹನ ಸೌಕರ್ಯಗಳು, ಆದರಾತಿಥ್ಯ ಭತ್ಯೆ, ವೈದ್ಯಕೀಯ ಸೌಲಭ್ಯಗಳು – ಇವುಗಳಿಗೆ ಸಂಬಂಧಿಸಿದ ಸೇವಾ ಷರತ್ತುಗಳು ಮತ್ತು ಅಂತಹ ಇತರ ಸೇವಾ ಷರತ್ತುಗಳು, ಆದಷ್ಟು ಮಟ್ಟಿಗೆ ಮುಖ್ಯ ಚುನಾವಣಾ ಆಯುಕ್ತನಿಗೂ ಮತ್ತು ಇತರ ಚುನಾವಣಾ ಆಯುಕ್ತರುಗಳಿಗೂ ಅನ್ವಯಿಸತಕ್ಕದ್ದು.

## ಅಧ್ಯಾಯ – III

## ಚುನಾವಣಾ ಆಯೋಗದ ವ್ಯವಹಾರ ನಿರ್ವಹಣೆ

9. **ಚುನಾವಣಾ ಆಯೋಗದ ವ್ಯವಹಾರ ನಿರ್ವಹಣೆ.**– ಚುನಾವಣಾ ಆಯೋಗದ ವ್ಯವಹಾರವನ್ನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ನಿರ್ವಹಿಸತಕ್ಕದ್ದು.

**10. ಚುನಾವಣಾ ಆಯೋಗದ ವ್ಯವಹಾರದ ಹಂಚಿಕೆ.**– (1) ಚುನಾವಣಾ ಆಯೋಗವು, ಸರ್ವಾನುಮತದ ನಿರ್ಣಯದ ಮೂಲಕ, ತನ್ನ ವ್ಯವಹಾರ ನಿರ್ವಹಣೆಗಾಗಿ ಹಾಗೆಯೇ ಮುಖ್ಯ ಚುನಾವಣಾ ಆಯುಕ್ತನ ಮತ್ತು ಇತರ ಚುನಾವಣಾ ಆಯುಕ್ತರುಗಳ ನಡುವೆ ಅದರ ಕಾರ್ಯಭಾರದ ಹಂಚಿಕೆಗಾಗಿ, ಕಾರ್ಯವಿಧಾನವನ್ನು ವಿನಿಯಮಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವುದನ್ನುಳಿದು, ಚುನಾವಣಾ ಆಯೋಗದ ಎಲ್ಲಾ ವ್ಯವಹಾರವನ್ನು, ಸಾಧ್ಯವಾದಷ್ಟು ಮಟ್ಟಿಗೆ, ಸರ್ವಾನುಮತದಿಂದ ನಿರ್ವಹಿಸತಕ್ಕದ್ದು.

(3) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾವುದೇ ವಿಷಯದ ಬಗ್ಗೆ ಮುಖ್ಯ ಚುನಾವಣಾ ಆಯುಕ್ತನು ಮತ್ತು ಇತರ ಚುನಾವಣಾ ಆಯುಕ್ತರುಗಳು ಭಿನ್ನಾಭಿಪ್ರಾಯವನ್ನು ಹೊಂದಿದ್ದರೆ, ಅಂತಹ ವಿಷಯವನ್ನು ಬಹುಮತದ ಅಭಿಪ್ರಾಯಕ್ಕನುಸಾರವಾಗಿ ನಿರ್ಣಯಿಸತಕ್ಕದ್ದು.

* * * * *